ಕರ್ನಾಟಕ ವಿಧಾನ ಸಭೆ

1185; ಶ್ರೀ ರಾಜ ವೆಂಕಟಪ್ಪ ನಾಯಕ (ಸುರಪುರ)

ಅ) ಯಾದಗಿರಿ ಜಿಲ್ಲೆ ಶೋರಾಪುರ ಮತಕ್ಷೇತ್ರದ ವ್ಯಾಪ್ತಿಗೆ ಬರುವ ದೊಡ್ಡಿ ಹಾಗೂ ತಾಂಡಾಗಳಿಗೆ ವಿದ್ಯುತ್ ಸಂಪರ್ಕ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ವಿದ್ಯುತ್ ಸಂಪರ್ಕ ಇಲ್ಲದೇ ಇರುವುದರಿಂದ ತೊಂದರೆಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ದೊಡ್ಡಿ ಹಾಗೂ ತಾಂಡಾಗಳಿಗೆ ಯಾವಾಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು;

ಈ) ಸದರಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿಯಲ್ಲಿ (ಆರ್.ಜಿ.ಜಿ.ವಿ.ವೈ) ಹಣ ಬಿಡುಗಡೆ ಮಾಡಲಾಗಿದೆಯೇ;

ಉ) ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)

ಊ) ಸದರಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಗೆ (ಆರ್.ಜಿ.ಜಿ.ವಿ.ವೈ) ಹಣ ಒದಗಿಸಲು 12ನೇ ಹಣಕಾಸು ಯೋಜನೆಯಲ್ಲಿ ತೆಗೆದುಕೊಳ್ಳಲಾಗುವುದೇ; ವಿವರ ನೀಡುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಯಿಂದ ಇ) ವರೆಗೆ ಯಾದಗಿರಿ ಜಿಲ್ಲೆ ಶೋರಾಪುರ ಮತಕ್ಷೇತ್ರದ ವ್ಯಾಪ್ತಿಗೆ ಬರುವ ದೊಡ್ಡಿ ಹಾಗೂ ತಾಂಡಾಗಳಿಗೆ ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ 11ನೇ ಯೋಜನೆಯಡಿಯಲ್ಲಿ ಈಗಾಗಲೇ 243 ಜನವಸತಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಈ) ಮತ್ತು ಉ) ಹೌದು ₹ 4.67 ಕೋಟಿ ಬಿಡುಗಡೆ ಮಾಡಲಾಗಿದೆ.

ಊ) ಹೌದು.

ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ 12ನೇ ಯೋಜನೆಯಡಿಯಲ್ಲಿ 130 ಜನವಸತಿ ಪ್ರದೇಶಗಳಿಗೆ ಹೆಚ್ಚುವರಿ ವಿದ್ಯುದೀಕರಣ (Intensive Electrification) ಮಾಡಲು ವಿವರವಾದ ಯೋಜನಾ ವರದಿಯನ್ನು ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ (ಆರ್.ಇ.ಸಿ) ರವರಿಗೆ ಸಲ್ಲಿಸಲಾಗಿದೆ. ಯೋಜನೆಯ ಅಂದಾಜು ಮೊತ್ತ ₹ 6.52 ಕೋಟಿಗಳು.

KARNATAKA LEGISLATIVE ASSEMBLY

1185; Sri Raja Venkatappa Nayaka (Surapura)

a) Has it come to the notice of the Government that there is no power supply to the Doddis and Tandas coming in the jurisdiction of Shorapur Assembly Constituency of Yadgiri District?

b) Has it come to the notice of the Government the problems faced by the people living in these areas without power supply?

c) If so, when will these Doddis and Thandas be energized?

d) Has any amount been released to electrify these places under Rajiv Gandhi Grameen Vidyutikaran Yojana (RGGVY)?

e) If so, How much amount has been released? (Details to be furnished)

f) To provide electricity supply to these areas under Rajiv Gandhi Grameen Vidyutikaran Yojana (RGGVY) scheme, can the fund for this scheme be provided in the 12th Year plan; Details to be furnished?

Sri D.K. Shivakumar

a) **to c)** Under Rajiv Gandhi Grameen Vidyutikaran Yojana 11th Plan in Shorapur Assembly Constituency of Yadgiri District, 243 Habitations has already been electrified.

d) **and e)** Yes. ₹ 4.67 Crores has been released.

f) Yes.

For Intensive Electrification works, 130 Habitations have been identified for taking up under RGGVY 12th Plan. A detailed Project report (DPR) has been submitted to Ministry of Power (REC) for sanction. The estimated cost is ₹ 6.52 crores.